# ಮೇರಾ ರೇಷನ್; ಇದ್ದಲ್ಲೇ ಪಡಿತರ!

■ ಶಶಿಕುಮಾರ್ ಸಿ.

ಕೇಂದ್ರ ಸರ್ಕಾರವು ಡಿಜಿಟಲೀಕರಣಕ್ಕೆ ಹೆಚ್ಚಿನ ಆದ್ಯತೆ ನೀಡಿದ್ದು, ಈಗಾಗಲೇ ಸಾಕಷ್ಟು ಸರ್ಕಾರಿ ಸೇವೆಗಳನ್ನು ಡಿಜಿಟಲೀಕರಣ ಮಾಡಿ ಸೈ ಎನಿಸಿಕೊಂಡಿದೆ. ಆ ಸಾಲಿಗೆ ಪಡಿತರ ಸೌಲಭ್ಯವೂ ಈಗ ಸೇರಿದೆ. ವಿಶೇಷವಾಗಿ ವಲಸಿಗರು ಸೇರಿದಂತೆ ದೇಶದ ನಾಗರಿಕರಿಗೆ ಅನುಕೂಲವಾಗಲೆಂದು ಕೇಂದ್ರ ಸರ್ಕಾರವು ಈಚೆಗೆ 'ಒನ್ ನೇಷನ್, ಒನ್ ರೇಷನ್ ಕಾರ್ಡ್' ಹೆಸರಿನ ಯೋಜನೆಯನ್ನು ಘೋಷಿಸಿತ್ತು. ಅದನ್ನು ಜಾರಿಗೊಳಿಸುವ ನಿಟ್ಟಿನಲ್ಲಿ, ಸರ್ಕಾರವು ಪಡಿತರ ಸೌಲಭ್ಯಕ್ಕೆ 'ಮೇರಾ ರೇಷನ್' ಅನ್ನುವ ಆ್ಯಪ್ ಅನ್ನು ಬಿಡುಗಡೆ ಮಾಡಿದೆ.

'ಒನ್ ನೇಷನ್, ಒನ್ ರೇಷನ್ ಕಾರ್ಡ್' ಕೇಂದ್ರ ಸರ್ಕಾರದ ಮಹತ್ವಾಕಾಂಕ್ಷೆಯ ಯೋಜನೆಗಳಲ್ಲಿ ಒಂದು. ದೇಶದಾದ್ಯಂತ ಒಂದೇ ರೀತಿಯ ಪಡಿತರ ಕಾರ್ಡ್ ವ್ಯವಸ್ಥೆಯ ಅನುಷ್ಠಾನ ಇದರ ಉದ್ದೇಶ. ಒನ್ ನೇಷನ್, ಒನ್ ರೇಷನ್ ಕಾರ್ಡ್ ಪಡಿತರ ಚೀಟಿ ಹೊಂದಿರುವವರು ದೇಶದ ಯಾವುದೇ ಭಾಗದಲ್ಲಿರುವ ಸರ್ಕಾರಿ ಪಡಿತರ ಅಂಗಡಿಗಳಿಂದ ಪಡಿತರ ಖರೀದಿಸಲು ಸಾಧ್ಯವಾಗುತ್ತದೆ. ವಲಸೆ ಕಾರ್ಮಿಕರು ಮತ್ತು ಅವರ ಕುಟುಂಬ ಸದಸ್ಯರಿಗೆ ಈ ವ್ಯವಸ್ಥೆಯಿಂದ ಹೆಚ್ಚಿನ ಅನುಕೂಲ.

ಉದ್ಯೋಗ ಅರಸಿ ಹುಟ್ಟೂರನ್ನು ತೊರೆದು ಬೇರೆಡೆಗೆ ಹೋಗುವ ಶ್ರಮಿಕವರ್ಗದವರು ದೇಶದಲ್ಲಿ ಬಹುಸಂಖ್ಯೆಯಲ್ಲಿದ್ದಾರೆ. ಅಂತಹ ಕೋಟ್ಯಂತರ ಮಂದಿ ವಲಸೆಯ ಕಾರಣಕ್ಕೆ ಪಡಿತರ ಸೌಲಭ್ಯದಿಂದ ವಂಚಿತರಾಗುತ್ತಿದ್ದಾರೆ. ಇದು ಅವರ ಬದುಕಿನ ಮೇಲೆಯೂ ಪರಿಣಾಮ ಬೀರುತ್ತಿದೆ. ಅಂಥವರಿಗೆ ತಾವಿದ್ದ ಕಡೆಯೇ ಸರ್ಕಾರಿ ನ್ಯಾಯಬೆಲೆ ಅಂಗಡಿಗಳಲ್ಲಿ ಪಡಿತರ ಒದಗಿಸುವ ವಿಶೇಷ ಸೌಲಭ್ಯವೇ ಈ 'ಒನ್ ನೇಷನ್, ಒನ್ ರೇಷನ್ ಕಾರ್ಡ್'. ಈ ಯೋಜನೆಯನ್ನು ಇನ್ನಷ್ಟು ಪರಿಣಾಮಕಾರಿಯಾಗಿಸುವ ಸಲುವಾಗಿಯೇ 'ಮೇರಾ ರೇಷನ್ ಆ್ಯಪ್' ಅನ್ನು ಅಸ್ತಿತ್ವಕ್ಕೆ ತರಲಾಗಿದೆ.

ವಲಸಿಗರು ತಾವು ಹೊಂದಿರುವ ರೇಷನ್ ಕಾರ್ಡ್‌ನ ಸಂಖ್ಯೆಯನ್ನು (ಪರ್ಯಾಯವಾಗಿ ರೇಷನ್ ಕಾರ್ಡ್‌ಗೆ ಲಿಂಕ್ ಆಗಿರುವ ಆಧಾರ್ ಸಂಖ್ಯೆಯನ್ನು) ನಮೂದಿಸಿ, ವಲಸೆ ಹೋಗಿರುವ ಸ್ಥಳದ ಬಗ್ಗೆ ಮಾಹಿತಿಯನ್ನು ಒದಗಿಸಿ ಆ್ಯಪ್‌ನಲ್ಲಿ ಹೆಸರು ನೋಂದಾಯಿಸಿಕೊಳ್ಳಬೇಕು. ಅದು ಯಶಸ್ವಿಯಾದ ಬಳಿಕ ಆ್ಯಪ್‌ನ ಮೂಲಕ ವಲಸಿಗರು ತಾವಿರುವ ಸಮೀಪಕ್ಕೆ ಹತ್ತಿರವಾದ ನ್ಯಾಯಬೆಲೆ ಅಂಗಡಿಗೆ ಹೋಗಿ ಪಡಿತರವನ್ನು ಪಡೆಯಬಹುದಾಗಿದೆ.




'ಒನ್ ನೇಷನ್ ಒನ್ ರೇಷನ್ ಕಾರ್ಡ್' ವ್ಯವಸ್ಥೆಯು ದೇಶದಾದ್ಯಂತ 69 ಕೋಟಿ ರಾಷ್ಟ್ರೀಯ ಆಹಾರ ಭದ್ರತಾ ಕಾಯ್ದೆ (ಎನ್‌ಎಫ್‌ಎಸ್‌ಎ) ಫಲಾನುಭವಿಗಳನ್ನು ಒಳಗೊಂಡಿದೆ. 'ಎನ್‌ಎಫ್‌ಎಸ್‌ಎ' ಫಲಾನುಭವಿಗಳನ್ನು ಸಾರ್ವಜನಿಕ ವಿತರಣಾ ವ್ಯವಸ್ಥೆ (ಪಿಡಿಎಸ್) ಮೂಲಕ 81 ಕೋಟಿಗೂ ಹೆಚ್ಚು ಜನರಿಗೆ 'ಹೆಚ್ಚು ಸಬ್ಸಿಡಿ ನೀಡುವ ಆಹಾರ ಧಾನ್ಯಗಳನ್ನು' ಒದಗಿಸಲು ಸರ್ಕಾರ ಬಳಸುತ್ತದೆ.

ಹೊಸ ವ್ಯವಸ್ಥೆಯನ್ನು ಸುಗಮವಾಗಿ ನಿರ್ವಹಿಸಲು 'ಮೇರಾ ರೇಷನ್' ಅಪ್ಲಿಕೇಷನ್ ಸರ್ಕಾರಕ್ಕೆ ಮತ್ತು ನಾಗರಿಕರಿಗೆ ಸಹಾಯ ಮಾಡುತ್ತದೆ. ಹೊಸ ಮೊಬೈಲ್ ಅಪ್ಲಿಕೇಷನ್ 'ಎನ್‌ಎಫ್‌ಎಸ್‌ಎ'ಯ ಫಲಾನುಭವಿಗಳು, ವಿಶೇಷವಾಗಿ ವಲಸೆ ಫಲಾನುಭವಿಗಳು, ನ್ಯಾಯಯುತ ಬೆಲೆ ಅಂಗಡಿ (ಎಫ್‌ಪಿಎಸ್) ನಡುವೆ ಒನೋರ್ಕ್ ಸಂಬಂಧಿತ ಸೇವೆಗಳನ್ನು ಸುಗಮಗೊಳಿಸುವ ಗುರಿ ಹೊಂದಿದೆ ಎಂದು ಆಹಾರ ಮತ್ತು ಸಾರ್ವಜನಿಕ ವಿತರಣಾ ವಿಭಾಗದ ಕಾರ್ಯದರ್ಶಿ ಸುಧಾಂಶು ಪಾಂಡೆ ಹೇಳಿದ್ದಾರೆ.




ಪ್ರಸ್ತುತ, ಈ ಅಪ್ಲಿಕೇಷನ್ ಆಂಡ್ರಾಯ್ಡ್‌ನಲ್ಲಿ ಮಾತ್ರ ಲಭ್ಯ. ಆ್ಯಪ್‌ನಲ್ಲಿ ನೋಂದಣಿ, ಕಾರ್ಡಿನ ಅರ್ಹತೆ, ಸ್ಥಳೀಯ ನ್ಯಾಯಬೆಲೆ ಅಂಗಡಿಗಳ ಜಿಪಿಎಸ್ ಲೋಕೇಷನ್, ಪಡಿತರ ಪಡೆದ ಮಾಹಿತಿ, ಅರ್ಹತಾ ಮಾನದಂಡಗಳು, ಆಧಾರ್ ಜೋಡಣೆ ಸೇರಿದಂತೆ ಪಡಿತರ ಯೋಜನೆಗೆ ಸಂಬಂಧಿತ ಹಲವಾರು ರೀತಿಯ ಸೇವಾ ಸೌಲಭ್ಯಗಳೂ ಲಭ್ಯ.

## ಆ್ಯಪ್‌ನ ಪ್ರಯೋಜನ

- ನಗರ ಪ್ರದೇಶಗಳಲ್ಲಿ ವಾಸಿಸುವ ಬಡವರು, ಅರೆಕಾಲಿಕ ಖಾಸಗಿ ನೌಕರರು, ಅಸಂಘಟಿತ ವಲಯದ ಕಾರ್ಮಿಕ ವರ್ಗದ ಜನರಿಗೆ ಹೆಚ್ಚು ನೆರವು.
- ಕಾರ್ಮಿಕರು, ದಿನಗೂಲಿ ನೌಕರರು, ಬಡ ಜನರು, ಬೀದಿ ಬದಿ ವ್ಯಾಪಾರಿಗಳಿಗೆ ಈ ಯೋಜನೆ ಸಹಾಯಕ.
- ನಕಲಿ ಕಾರ್ಡ್ ಬಳಕೆಗೆ ಕಡಿವಾಣ.
- ಕಾಳಸಂತೆಯಲ್ಲಿ ಪಡಿತರ ಸೋರಿಕೆ ತಡೆ ಸಾಧ್ಯ.
- ವಲಸೆ ಕಾರ್ಮಿಕರು ಮತ್ತು ಅವರ ಕುಟುಂಬ ಸದಸ್ಯರಿಗೆ ಪಡಿತರ ಪಡೆಯಲು ಅನುಕೂಲ.
- ಎಲ್ಲಾ ಪಡಿತರ ಚೀಟಿಗಳನ್ನು ಆಧಾರ್ ಕಾರ್ಡ್‌ಗೆ ಸಂಪರ್ಕಿಸುವ ಮತ್ತು ಪಾಯಿಂಟ್ ಆಫ್ ಸೇಲ್, ಪಿಒಎಸ್ ಯಂತ್ರದ ಮೂಲಕ ಆಹಾರ ಧಾನ್ಯಗಳನ್ನು ವಿತರಿಸುವ ವ್ಯವಸ್ಥೆ.
- ಬಡವರಿಗೆ ಹೆಚ್ಚಿನ ಲಾಭ.